

## ಮೊದಲ ನೋಟದ ಪ್ರೀತಿ

ಲವ್ ಅಟ್ ಫಸ್ಟ್ ಸೈಟ್ – ಮೊದಲ ನೋಟದ ಪ್ರೀತಿ – ಎನ್ನುತ್ತಾರಲ್ಲ, ಅದಕ್ಕೆ ವೈಜ್ಞಾನಿಕ ಆಧಾರಗಳಿವೆಯೆ? ಆ ಬಗ್ಗೆ ಅಧ್ಯಯನವೊಂದು ನಡೆದಿದೆ. ಸಣ್ಣ ಪ್ರಮಾಣದ ಒಂದು ಗುಂಪಿನ ಜನರ ಮೇಲೆ ನಡೆದ ಅಧ್ಯಯನದಲ್ಲಿ ಸಂಪೂರ್ಣ ಅಪರಿಚಿತ ಜೋಡಿಗಳನ್ನು ಅರ್ಧ ಗಂಟೆಯ ಕಾಲ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲು ಹೇಳಲಾಯ್ತು. ನಾಲ್ಕು ನಿಮಿಷಗಳ ಕಾಲ ಒಬ್ಬರ ಕಣ್ಣನ್ನು ಇನ್ನೊಬ್ಬರು ಆಳವಾಗಿ ನೋಡಲು ಹೇಳಲಾಯ್ತು. ಈ ಅವಧಿಯ ನಂತರ, ಅವರಲ್ಲಿ ಹಲವರ ನಡುವೆ ಆಳವಾದ ಗೆಳೆತನ ಬೆಳೆಯಿತು. ಅವರಲ್ಲಿ ಇಬ್ಬರು ಮದುವೆಯೂ ಆಗಿಬಿಟ್ಟರು. ಆದರೆ ಈ ಅಧ್ಯಯನ ಸಣ್ಣ ಗುಂಪಿನ ಮೇಲೆ ನಡೆದ ಕಾರಣ ಅದು ಪ್ರೀತಿಯೇ ಅಲ್ಲವೋ ಎಂದು ತಿಳಿಸಬಲ್ಲ ನಂಬಲರ್ಹ ಅಧ್ಯಯನವಲ್ಲ. ಸಾಧ್ಯತೆಯನ್ನು ತೋರಿಸುತ್ತದೆ ಅಷ್ಟೆ. ಇದೇ ಕಾರಣಕ್ಕೆ ಘಟಿಸಿದ್ದು ನೈಜ ಪ್ರೀತಿಯೇ ಅಥವಾ ಆಕರ್ಷಣೆ ಮಾತ್ರವೇ ಎಂಬ ಬಗ್ಗೆ ತಿಳಿಯುವುದು ಮುಖ್ಯ.

**ಒಲುಮೆಯ ಸಲುವಾಗಿ ಎಲ್ಲವ ತೆತ್ತೆ,**
**ಚಂದವ, ಪ್ರಾಯವ, ಜೀವವ ತೆತ್ತೆ,**
**ಒಲಿಯಲು ತೆತ್ತೆ,**
**ಒಲಿದುದಕೇ ತೆತ್ತೆ;**
**ಸಾಯುವೆ; ತುಸುಹೊತ್ತು ಮುತ್ತಿಡು ಮತ್ತೆ**

**-ಪು.ತಿ.ನ.**

ಮತ್ತೊಂದು ಅಧ್ಯಯನದಲ್ಲಿ 1523 ಜೋಡಿಗಳ ವ್ಯಕ್ತಿತ್ವವನ್ನು ಹೊಂದಿಸುವ ಪ್ರಯತ್ನ ನಡೆಯಿತು. ಶೇ. 86 ಜನ ತಮ್ಮಂತದ್ದೇ ವ್ಯಕ್ತಿತ್ವದ ವ್ಯಕ್ತಿಗಳನ್ನು ಆರಿಸಿಕೊಂಡಿದ್ದರು. ಆ ಜೋಡಿಗಳ ವಿಚಾರಧಾರೆ, ನಂಬಿಕೆಗಳು ಹೆಚ್ಚೂಕಡಿಮೆ ಒಂದೇ ತೆರನಾಗಿದ್ದವು.

ಸಮಾನ ವಿಚಾರಧಾರೆ ಎಂದಮಾತ್ರಕ್ಕೆ ರೂಪ ಮತ್ತು ಅಂದ–ಚೆಂದಗಳು ಪಾತ್ರ ವಹಿಸುವುದಿಲ್ಲ ಅಂತಲ್ಲ. ಸ್ಫುರದ್ರೂಪಿಗಳು ಹೆಚ್ಚು ಜನರನ್ನು ಆಕರ್ಷಿಸುವುದು ಬರೇ ದೈಹಿಕ ಲಕ್ಷಣಗಳಿಂದ ಮಾತ್ರವಲ್ಲ, ಆರೋಗ್ಯದ ದೃಷ್ಟಿಯಿಂದ ಕೂಡ. ಸಂತಾನವರ್ಧನೆಗೆ ಸಂಗಾತಿಯನ್ನು ಆಯ್ದುಕೊಳ್ಳಲು ನಮ್ಮ ದೇಹದಲ್ಲಿ ದೇವರು ನೀಡಿದ ಪ್ರಕೃತಿ ಸಹಜ ಮೂಲಪ್ರವೃತ್ತಿಯೂ ಪ್ರೇರಣೆಯಾಗುತ್ತದೆ. ಆ ಕಾರಣದಿಂದಲೇ ಹೆಂಗಸರು ಕಟ್ಟುಮಸ್ತಾದ, ಆರೋಗ್ಯವಂತ ಗಂಡಸರನ್ನು ಇಷ್ಟಪಟ್ಟರೆ, ಗಂಡಸರು ಉತ್ತಮ ಮೈ ಮಾಟದ ಹೆಂಗಸರನ್ನು ಮೆಚ್ಚುತ್ತಾರೆ.

ಬದುಕಿನಲ್ಲಿ ನಮಗೆ ಎಂಥವರಿಂದ ಉತ್ತಮ ಅನುಭವ ಆಗಿರುತ್ತದೋ ಅಂಥವರ ಮುಖಗಳು ಕೂಡ ಆಕರ್ಷಕವಾಗಿ ಕಾಣುತ್ತವೆ. ಅಂತೆಯೇ ದೇಹದ ಅಳತೆ–ತೂಕ–ಗಾತ್ರ, ಅಚ್ಚುಕಟ್ಟು ಇತ್ಯಾದಿ ವಿಚಾರಗಳು ಕೂಡ ಸಂಗಾತಿಗಳ ಆಯ್ಕೆಯಲ್ಲಿ ಪಾತ್ರವನ್ನು ವಹಿಸುತ್ತವೆ. ಏಕೆಂದರೆ, ಸಂತಾನವರ್ಧನೆಗೆ ಉತ್ತಮ ಆರೋಗ್ಯ ಅವಶ್ಯಕ.

ಸಂಗಾತಿಗಳ ಆಯ್ಕೆಯ ವಿಚಾರಕ್ಕೆ ಬಂದಾಗ ಗಂಡಾಗಲೀ ಹೆಣ್ಣಾಗಲೀ ಹಲವು ಹತ್ತು ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳಿಂದ ಪ್ರಭಾವಿತರಾಗುತ್ತಾರೆ. ಇದೇ ಹಲವು ಕಾರಣಗಳ ಸಂಯೋಗದ ಪರಿಣಾಮವಾಗಿ ಯಾರೋ ಒಬ್ಬರು ಮಾತ್ರ ನಮ್ಮ ಪ್ರೀತಿಯ ಭಾವನೆಗಳನ್ನು ಜಾಗೃತಗೊಳಿಸುತ್ತಾರೆ. ಇದೇ ಕಾರಣಕ್ಕೆ ಯಾರಿಗೆ ಯಾರ ಮೇಲೆ ಪ್ರೀತಿಯಾಗುತ್ತದೆ ಎಂದು ಹೇಳುವುದು ಅತ್ಯಂತ ಕಷ್ಟದ ಕೆಲಸ!

ಒಮ್ಮೆ ಪ್ರೀತಿಯಲ್ಲಿ ಬಿದ್ದನಂತರ ಅವರ ದೇಹದಲ್ಲಿ ಸೆರೆಟೋನಿನ್ (ಸಂತೋಷ ನೀಡುವ ಹಾರ್ಮೋನು) ಎನ್ನುವ ಹಾರ್ಮೋನಿನ ಪ್ರಮಾಣ ಕಡಿಮೆಯಾಗುತ್ತದೆ. ಒಂದೆಡೆ ಸೆಕ್ಸ್ ಹಾರ್ಮೋನುಗಳ ಉದ್ರೇಕದ ಶಕ್ತಿ ಬಂದರೆ, ಇನ್ನೊಂದೆಡೆ ಪ್ರೇಮಿಯೋರ್ವರ ಮೇಲೆ ಮಾತ್ರ ಧ್ಯಾನ ಹರಿವ ಕಾರಣ ಹಸಿವು, ನೀರಡಿಕೆಗಳು ಕಡಿಮೆಯಾಗುತ್ತವೆ. ಇದೇ ಕಾರಣಕ್ಕೆ ಪ್ರೀತಿಯಲ್ಲಿ ಬಿದ್ದವರು ಚಿತ್ತಾದಂತೆ ಕಾಣತೊಡಗುವುದು. ಇದೇ ಹಾರ್ಮೋನು ಗೀಳಿನ ಗುಣವನ್ನೂ ಉಂಟುಮಾಡುತ್ತದೆ. ಪ್ರೇಮಿಯದೇ ಧ್ಯಾನವಾಗುತ್ತದೆ. ಹಾಗಾದರೆ ಪ್ರೀತಿಯೆನ್ನುವುದೆಲ್ಲ ದೈಹಿಕ ರಾಸಾಯನಿಕಗಳಿಗೆ ಮಾತ್ರ ಸೀಮಿತವಾದ ಪ್ರಚೋದನೆ ಮಾತ್ರವೇ?

ಭಗ್ನಪ್ರೇಮಿಗಳ ಮಾನಸಿಕ ಆರ್ತನಾದ ಪ್ರೀತಿಯಷ್ಟೇ ಪ್ರಸಿದ್ಧ.

